**I ನೇ ಹೆಚ್ಚುವರಿ ನ್ಯಾಯಾಲಯ ಹಾಗೂ ಜೆ ಎಮ್ ಎಫ್ ಸಿ, ಬೆಳಗಾವಿ**

**O.S.No.**1316/2014

**DW**-4

**ಪ್ರಮಾಣ ವಚನ ಬೋಧಿಸಿದ ದಿನಾಂಕಃ** 18-02-2019.

**ಮುಖ್ಯ ವಿಚಾರಣೆ ಪ್ರತಿವಾದಿ ಪರ ವಕೀಲರು ಶ್ರೀ ಆರ್ ಕೆ ಪಿ ರವರಿಂದ**

ನನ್ನ ಮುಖ್ಯ ವಿಚಾರಣೆ ಸಲುವಾಗಿ ಸಲ್ಲಿಸಿರುವ ಪ್ರಮಾಣ ಪತ್ರದಲ್ಲಿರುವ ಎಲ್ಲ ಅಂಶಗಳು ಸತ್ಯವಾಗಿರುತ್ತದೆ.

**ಪಾಟೀ ಸವಾಲು ವಾದಿ ಪರ ವಕೀಲರಾದ ಶ್ರೀ ಆರ್ ಎ ಸಿ ರವರಿಂದ** _

1. ನನಗೆ 70 ವರ್ಷ ವಯಸ್ಸು ಇರುತ್ತದೆ. ನಾನು 4 ನೇ ತರಗತಿಯವರಗೆ ಮಾರಾಠಿ ಮಾಧ್ಯಮದಲ್ಲಿ ಹಲಗಾ ಗ್ರಾಮದಲ್ಲಿ ಓದಿರುತ್ತೇನೆ. ನನಗೆ ಇಂಗ್ಲೀಷ ಓದಲು , ಬರೆಯಲು ಬರುವುದಿಲ್ಲ ಎಂದರೆ ಸರಿ . ನನ್ನ ಮುಖ್ಯ ವಿಚಾರಣೆ ಪ್ರಮಾಣ ಪತ್ರ ಬರೆದಿರುವ ವಿಚಾರಗಳ ಬಗ್ಗೆ ಮಾಹಿತಿ ಇರುವುದಿಲ್ಲ ಎಂದರೆ ಸರಿ . ಈ ಕೇಸಿನಲ್ಲಿ ಸಾಕ್ಷಿ ಹೇಳುವಂತೆ ನನಗೆ ಸಮನ್ಸ ಬಂದಿರುವುದಿಲ್ಲ. ಈ ದಾವೆಯ ಬಗ್ಗೆ ನನಗೆ ಯಾವುದೇ ಮಾಹಿತಿ ಇರುವುದಿಲ್ಲ. ನನ್ನ ಮುಖ್ಯ ವಿಚಾರಣೆಯ ಪ್ರಮಾಣ ಪತ್ರಕ್ಕೆ ಮಾಹಿತಿಯನ್ನು 5 ನೇ ಪ್ರತಿವಾದಿ ನೀಡಿರುತ್ತಾರೆ. ಈ ಕೇಸಿನಲ್ಲಿ ಸಾಕ್ಷಿ ಹೇಳಲು ನನಗೆ ಮಾಹಿತಿಯನ್ನು 5 ನೇ ಪ್ರತಿವಾದಿ ನೀಡಿರುತ್ತಾರೆ ಎಂದರೆ ಸರಿಯಲ್ಲ. ನಾನು ಮತ್ತು 5 ನೇ ಪ್ರತಿವಾದಿ ಸ್ನೇಹಿತರು ಎಂದರೆ ಸರಿಯಲ್ಲ.

2. ನಾನು ದಾವಾ ಆಸ್ತಿಯ ಪಕ್ಕದಲ್ಲಿರುವ ಆಸ್ತಿಯ ಮಾಲೀಕರಾಗಿರುತ್ತೇನೆಂದು ತೋರಿಸಲು ನಾನು ದಾಖಲೆಯನ್ನು ಹಾಜರು ಪಡಿಸಿರುವುದಿಲ್ಲ. ನನಗೆ

ಬಾಹುಕಾನಾ ರಾಜಾರಾಮ ಮುತಗೇಕರ ಇವರ ಪರಿಚಯ ಇರುತ್ತದೆ. ಸದರಿರವರು ದಾವಾ ಆಸ್ತಿಯನ್ನು ವಾದಿಗೆ ಮಾರಾಟ ಮಡಿರುತ್ತಾರೆಂದು ಸೂಚಿಸಲಾಗಿ ಎಂದು ಸಾಕ್ಷಿಯು, ಅವರ ಕುಟುಂಬಕ್ಕೆ ಮಾರಾಟ ಮಾಡಿರುವುದಾಗಿ ಹೇಳುತ್ತಾರೆ.

3. ನಿಪಿಃ 1 ರಲ್ಲಿ ದಾವಾ ಆಸ್ತಿಯನ್ನು ವಾದಿಗೆ ಮಾರಾಟ ಮಾಡಲಾಗಿರುತ್ತದೆ ಎಂದು ನಮೂದಿಸಲಾಗಿರುತ್ತದೆ ಎಂದರೆ ಸರಿ . ನಿಪಿಃ ರಲ್ಲಿ ದಾವಾ ಆಸ್ತಿಯನ್ನುವಾದಿಯ ಕಬ್ಜೆಗೆ ಕೊಟ್ಟ ಬಗ್ಗೆ ನಮೂದು ಇರುತ್ತದೆ ಎಂದರೆ ನನಗೆ ಗೊತ್ತಿಲ್ಲ.

4. ದಾವಾ ಆಸ್ತಿಯ ಸರ್ವೆ ನಂಬರ ನನಗೆ ಹೇಳಲು ಬರುವುದಿಲ್ಲ. ವಾದಿ ಹಾಗೂ ಅವರ ಸಹೋದರರ ನಡುವೆ ಹಿಸ್ಸೆ ಆದ ಬಗ್ಗೆ, ನನಗೆ ಮಾಹಿತಿ ಇರುವುದಿಲ್ಲ.

5. ನನಗೆ ವಾದಿಯ ಪರಿಚಯ ಇರುತ್ತದೆ. ಸಾಕ್ಷಿ ಮುಂದುವರೆದು, ನನಗೆ ವಾದಿ ಹಾಗೂ ಪ್ರತಿವಾದಿಯರ ಪರಿಚಯ ಇರುತ್ತದೆ ಎಂದು ಹೇಳುತ್ತಾರೆ. ನನಗೆ ಈ ಕೇಸಿಗೆ ಬಗ್ಗೆ ಯಾವುದೇ ಮಾಹಿತಿ ಇಲ್ಲದಿದ್ದರೂ, 4 ವ 5 ನೇ ಪ್ರತಿವಾದಿಯರ ಮಾತು ಕೇಳಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆಂದರೆ ಸರಿಯಲ್ಲ.

**ಮರು ವಿಚಾರಣೆ ಇಲ್ಲ.**

(ತೆರೆದ ನ್ಯಾ. ಸಾಕ್ಷಿ ಹೇಳಿಕೆಯ ಮೇರೆಗೆ ಬೆರಳಚ್ಚು ಮಾಡಲಾಯಿತು)

ಓ. ಹೇ. ಕೇ. ಸರಿಯಿದೆ.

Sd/-

1 ನೇ ಹೆಚ್ಚುವರಿ ಸಿವಿಲ್ ನ್ಯಾ. ಹಾಗೂ

ಜೆ ಎಮ್ ಎಫ್ ಸಿ, ಬೆಳಗಾವಿ